# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 122 |
| ಸದಸ್ಯರ ಹೆಸರು | : | ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.12.2021 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 2 ವರ್ಷಗಳಲ್ಲಿ ರಾಜ್ಯ ಸರ್ಕಾರಿ ಹಾಗೂ ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವ ಸಮವಸ್ತ್ರಗಳನ್ನು ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ, ಖರೀದಿಸಿದ ಒಟ್ಟು ಮೊತ್ತ ಎಷ್ಟು;(ಜಿಲ್ಲಾವಾರು ಮಾಹಿತಿ ಒದಗಿಸುವುದು)</td><td>ಹೌದು<br><br>ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತ ಸಮವಸ್ತ್ರ ನೀಡಲಾಗುತ್ತಿದೆ. ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ನೀಡಲಾಗುತ್ತಿಲ್ಲ. ಎರಡು ವರ್ಷದ ಖರೀದಿ ಮೊತ್ತವು ಕೆಳಗಿನಂತಿದೆ:<br><br>ಮೊದಲನೆಯ ಜೊತೆ ಸಮವಸ್ತ್ರದ ವಿವರ:<br><table><tr><th>ವರ್ಷ</th><th>ಖರೀದಿ ಮೊತ್ತ</th></tr><tr><td>2019-20</td><td>ರೂ.72.35 ಕೋಟಿ</td></tr><tr><td>2020-21</td><td>ರೂ.77.64 ಕೋಟಿ</td></tr></table><br>ಎರಡನೇ ಜೊತೆಯ ಸಮವಸ್ತ್ರದ ವಿವರ:<br><table><tr><th>ವರ್ಷ</th><th>ಖರೀದಿ ಮೊತ್ತ</th></tr><tr><td>2019-20</td><td>ರೂ.94.00 ಕೋಟಿ</td></tr><tr><td>2020-21</td><td>-----</td></tr></table><br>ಸಮವಸ್ತ್ರ ಬಟ್ಟೆಯನ್ನು ಕೇಂದ್ರೀಕೃತವಾಗಿ ರಾಜ್ಯಮಟ್ಟದಲ್ಲಿ ಖರೀದಿಸಿ ಸರಬರಾಜು ಮಾಡಲಾಗುತ್ತಿರುವುದರಿಂದ ಜಿಲ್ಲೆಗಳಿಗೆ ಅನುದಾನ ಒದಗಿಸಿರುವುದಿಲ್ಲ.</td></tr>
</table>

ಆ) ಸದರಿ ಯೋಜನೆಯಡಿಯಲ್ಲಿ ಯಾವ ಯಾವ ಸಂಸ್ಥೆಗಳಿಂದ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಖರೀದಿಸಲಾಗಿದೆಯೇ? (ಸಂಪೂರ್ಣ ವಿಸ್ತೃತ ಮಾಹಿತಿ ಒದಗಿಸುವುದು)

**2019-20**ನೇ ಸಾಲಿನಲ್ಲಿ **ಮೊದಲನೆಯ** ಜೊತೆ ಸಮವಸ್ತ್ರವನ್ನು ಈ ಕೆಳಕಂಡ ಸಂಸ್ಥೆಗಳಿಂದ ಖರೀದಿಸಲಾಗಿದೆ.

| ಖರೀದಿ ಮಾಡಿದ ಸಂಸ್ಥೆ | ಸರಬರಾಜು ಮಾಡಿದ ಜಿಲ್ಲೆಗಳ ವಿವರ | ಮಕ್ಕಳ ಸಂಖ್ಯೆ ಮತ್ತು ಸರಬರಾಜು ಪ್ರಮಾಣ | ಖರೀದಿ ಮೊತ್ತ |
|---|---|---|---|
| ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ . (ಕೆ.ಹೆಚ್.ಡಿ.ಸಿ) | ಕಲಬುರಗಿ ಮತ್ತು ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ | 20,11,075 ಮಕ್ಕಳಿಗೆ ರೂ. 49.14 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆ | ರೂ.37.43 ಕೋಟಿ |
| ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಐ.ಡಿ.ಸಿ) | ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ | 4,07,457 ಮಕ್ಕಳಿಗೆ 10 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆ | ರೂ.5.75 ಕೋಟಿ |
| ಇ-ಟೆಂಡರ್‌ನಲ್ಲಿ ಆಯ್ಕೆಯಾದ ಸಂಗಂ ಇಂಡಿಯಾ ಲಿ., ರಾಜಸ್ಥಾನ | ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳ, ಬೆಳಗಾವಿ ವಿಭಾಗದ 7 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ 8 ರಿಂದ 10ನೇ ತರಗತಿಯ ಹೆಣ್ಣುಮಕ್ಕಳಿಗೆ ಚೂಡೀದಾರ್ ಸಮವಸ್ತ್ರ | 19,42,564 ಮಕ್ಕಳಿಗೆ 65.5 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆ | ರೂ.28.61 ಕೋಟಿ |

**2019-20**ನೇ ಸಾಲಿನಲ್ಲಿ **ಎರಡನೇಯ ಜೊತೆ** ಸಮವಸ್ತ್ರಕ್ಕಾಗಿ ರೂ.94.00 ಕೋಟಿ ಅನುದಾನ ಒದಗಿಸಲಾಗಿದ್ದು, ಪ್ರತಿ ವಿದ್ಯಾರ್ಥಿಗೆ ರೂ.250.00 ರಂತೆ ಆಯಾ ಶಾಲೆಗಳ ಮುಖ್ಯೋಪಾಧ್ಯಯರು ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ (ಎಸ್.ಡಿ.ಎಂ.ಸಿ) ಜಂಟಿ ಖಾತೆಗೆ ಬಿಡುಗಡೆ ಮಾಡಲಾಗಿದೆ.

2020–21ನೇ ಸಾಲಿನಲ್ಲಿ **ಮೊದಲನೆಯ ಜೊತೆ** ಸಮವಸ್ತ್ರವನ್ನು ಈ ಕೆಳಕಂಡ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ.

| | | | |
|---|---|---|---|
| ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ, (ಕೆ.ಹೆಚ್.ಡಿ.ಸಿ) | ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ ಮತ್ತು ಬೆಂಗಳೂರು ವಿಭಾಗದ 6 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ | 14,48,544 ಮಕ್ಕಳಿಗೆ 36.45 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆ | ರೂ.27.78 ಕೋಟಿ |
| ಇ–ಟೆಂಡರ್‌ನಲ್ಲಿ ಆಯ್ಕೆಯಾದ ಅರವಿಂದ್ ಕಾಟ್ಸಿನ್ ಲಿ., ಮಹಾರಾಷ್ಟ್ರ | ಮೈಸೂರು ಮತ್ತು ಬೆಳಗಾವಿ ವಿಭಾಗದ ಎಲ್ಲಾ ಜಿಲ್ಲೆಗಳ, ಬೆಂಗಳೂರು ವಿಭಾಗದ 5 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ 8 ರಿಂದ 10ನೇ ತರಗತಿ ಹೆಣ್ಣುಮಕ್ಕಳಿಗೆ ಚೂಡೀದಾರ್ ಸಮವಸ್ತ್ರ. | 28,07,268 ಮಕ್ಕಳಿಗೆ 89.93 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆ | ರೂ.49.39 ಕೋಟಿ |

**ಇಪಿ: 51 ಎಂಪಿಇ 2021**

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು